**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ</u>**
**<u>ಘನ ನ್ಯಾಯಾಲಯದಲ್ಲಿ</u>**

**<u>ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್ *6/2014*</u>**

ದಿನಾಂಕಃ ***01.04.2021***
ಸಾಕ್ಷಿಗೆ ಪ್ರಮಾಣ ವಚನ
ಬೋಧಿಸಲಾಯಿತು.

**ಪ್ರಾ.ಸಾಃ *1* (ಚಾ.ಸಾ.*1*)**

| | | |
|---|---|---|
| ಹೆಸರು | ಃ | ರಾಮದಾಸ್ |
| ಗಂಡನ ಹೆಸರು | ಃ | ದಾಸಪ್ಪ ಉಃ ದಾಸೇಗೌಡ |
| ವಯಸ್ಸು | ಃ | *53* ವರ್ಷ |
| ಉದ್ಯೋಗ | ಃ | ವ್ಯವಸಾಯ/ಕಂಟ್ರಾಕ್ಟರ್ |
| ವಾಸ ಸ್ಥಳ | ಃ | **ಕೋಮನಹಳ್ಳಿ** |

**<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

ಈ ಪ್ರಕರಣದ ದೂರು ಕೊಡುವ *5-6* ತಿಂಗಳ ಹಿಂದಿನಿಂದ ನಾನು ಕಂಟ್ರಾಕ್ಟ ಕೆಲಸ ಮಾಡಲು ಪ್ರಾರಂಭಿಸಿದ್ದೆ. ಚಾಸಾ.*5* – ಸೌಮ್ಯ ನನ್ನ ತಂಗಿಯ ಮಗಳು. ಸದರಿಯ ಸೌಮ್ಯಳ ವಯಸ್ಸು ಈಗ *25* ವರ್ಷಗಳು. ಸೌಮ್ಯ ಬಿ.ಕಾಂ ಪದವೀಧರೆ. ನಾನು *2* ಅಥವಾ *3* ತರಗತಿಯವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು, ಬರೆಯಲು ಅಷ್ಟಾಗಿ ಬರುವುದಿಲ್ಲ.

*2.* ನಾನು ಕೋಮನಹಳ್ಳಿಯ ರೋಜ್ಗಾರ್ ಯೋಜನೆಯಡಿ ಚರಂಡಿ ಕೆಲಸದ ಕಾಂಟ್ರಾಕ್ಟ ಮಾಡಿಸುತ್ತಿದ್ದೆ. ರಾಂಪುರ ಗ್ರಾಮ ಪಂಚಾಯತಿಯಿಂದ ಸದರಿ ಕಂಟ್ರಾಕ್ಟನ್ನು ರೂ.*1* ಲಕ್ಷಕ್ಕೆ *2012* ರಲ್ಲಿ ನನಗೆ ವಹಿಸಿದ್ದರು. ಕಂಟ್ರಾಕ್ಟ ವಹಿಸಿಕೊಟ್ಟಂತೆ ನಾನು ಚರಂಡಿಯ ಕೆಲಸವನ್ನು ಪೂರ್ತಿ ಮಾಡಿದೆ. ಆ ಸಮಯದಲ್ಲಿ ಬಸವಲಿಂಗಯ್ಯ ಅಂದರೆ ನ್ಯಾಯಾಲಯದ ಮುಂದಿರುವ *1* ನೇ ಆರೋಪಿ ರಾಂಪುರ ಗ್ರಾಮ ಪಂಚಾಯತಿಯ ಕಾರ್ಯದರ್ಶಿಯಾಗಿದ್ದರು. ಕಂಟ್ರಾಕ್ಟ ಕೆಲಸ ಮುಗಿದ ನಂತರ ನಾನು *1* ನೇ ಆರೋಪಿಯನ್ನು ಭೇಟಿ ಮಾಡಿ ಕೆಲಸ ಮುಗಿದ ಬಗ್ಗೆ ಅವರಿಗೆ

ತಿಳಿಸಿದೆನು. ಆಗ *1* ನೇ ಆರೋಪಿ ಬಿಲ್ ಮಾಡಿ ರೂ.*65* ಸಾವಿರ *800* ಚಿಲ್ಲರೆ ಹಣ ಬ್ಯಾಂಕಿನಲ್ಲಿದ್ದ ಲೇಬರರ್ ಖಾತೆಗೆ ಜಮಾ ಮಾಡಿದರು. ನನಗೆ ಸದರಿ ಕಂಟ್ರಾಕ್ಟ ಬಾಬ್ತು ರೂ.*28* ಸಾವಿರ ಚಿಲ್ಲರೆ ಹಣ ಪಂಚಾಯತಿಯಿಂದ ಬರಬೇಕಾಗಿತ್ತು. ಸದರಿ ರೂ.*28* ಸಾವಿರ ಚಿಲ್ಲರೆ ಹಣದ ಬಗ್ಗೆ ಕಾರ್ಯದರ್ಶಿ - ಬಸವಲಿಂಗಯ್ಯರವರನ್ನು ಕೇಳಿದಾಗ ರೂ.*1* ಲಕ್ಷದ ಶೇಕಡಾ *16* ರಷ್ಟು ಹಣವನ್ನು ಪಂಚಾಯತಿಗೆ ಕೊಡಬೇಕೆಂದು ಕೇಳಿದರು. ಆಗ ನಾನು ಅಷ್ಟು ಕೊಡಲು ಆಗುವುದಿಲ್ಲ, ಕಮ್ಮಿ ಮಾಡಿಕೊಳ್ಳಿ ಎಂದು *1* ನೇ ಆರೋಪಿಗೆ ಹೇಳಿದೆನು. ಆ ಸಮಯದಲ್ಲಿ ನನ್ನ ಬಳಿ ಎಂಟಿಎಸ್ ಕಂಪನಿಯ ಮೊಬೈಲ್ ಇದ್ದಿತು. ಆ ದಿನ *1* ನೇ ಆರೋಪಿಯೊಂದಿಗೆ ಮಾತನಾಡಲು ನಾನು ಹೋಗಿದ್ದಾಗ ನನ್ನೊಂದಿಗೆ ನನ್ನ ತಂಗಿಯ ಮಗಳು ಸೌಮ್ಯಳನ್ನು ಕರೆದುಕೊಂಡು ಹೋಗಿದ್ದೆ. ನನ್ನ ಮತ್ತು *1* ನೇ ಆರೋಪಿಯ ನಡುವಿನ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳಲು ನಾನು ಆ ದಿನ ಸೌಮ್ಯಳನ್ನು ನನ್ನೊಂದಿಗೆ ಕರೆದುಕೊಂಡು ಹೋಗಿದ್ದೆ. ನನ್ನ ಮತ್ತು *1* ನೇ ಆರೋಪಿಯ ನಡುವಿನ ಆ ದಿನದ ಸಂಭಾಷಣೆಯನ್ನು ನನ್ನ ಮೊಬೈಲ್‌ನಲ್ಲಿ ರೆಕಾರ್ಡ್ ಮಾಡಿಕೊಳ್ಳಲಾಯಿತು. ಸದರಿ ಸಂಭಾಷಣೆಯನ್ನು ರೆಕಾರ್ಡ್ ಮಾಡಿಕೊಳ್ಳುವುದನ್ನು ನನ್ನ ತಂಗಿಯ ಮಗಳಾದ ಸೌಮ್ಯ ನನಗೆ ಆ ದಿನ ಹೇಳಿಕೊಟ್ಟಿದ್ದಳು.

*3.* ಮರುದಿನ ನಾವು ಲೋಕಾಯುಕ್ತ ಕಚೇರಿಗೆ ಹೋದೆವು. ನನ್ನೊಂದಿಗೆ ಕೆಲಸ ಮಾಡಿದ ನಾಲ್ಕು ಜನ ಆ ದಿನ ಲೋಕಾಯುಕ್ತ ಕಚೇರಿಗೆ ಬಂದಿದ್ದರು. ನಾನು ಮೊಬೈಲ್‌ನ್ನು ಹಾಗು ದೂರನ್ನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟೆನು. ದೂರನ್ನು ನನ್ನ ತಂಗಿಯ ಮಗಳು ಸೌಮ್ಯ ಬರೆದಿದ್ದು, ನಾನು ಅದಕ್ಕೆ ಸಹಿ ಮಾಡಿಕೊಟ್ಟೆನು. ಆ ದೂರನ್ನು ನೋಡಿದರೆ ಗುರುತಿಸಬಲ್ಲೆ. ದೂರನ್ನು ಹಾಗು ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ದೂರನ್ನು ಈಗ ನಿಪಿ.*1* ಎಂತಲೂ ಸಾಕ್ಷಿಯ ಸಹಿಯನ್ನು ನಿಪಿ.*1*(ಎ) ಎಂದು ಗುರುತಿಸಲಾಯಿತು.

*4.* ನಾನು ದೂರು ಕೊಟ್ಟ ನಂತರ ಲೋಕಾಯುಕ್ತ ಪೊಲೀಸರು ಬೇರೆ ಇಲಾಖೆಯ ಮಹಾದೇವ ಹಾಗು ಮಂಜು ಎನ್ನುವವರನ್ನು ಕರೆಸಿದರು. ಅವರುಗಳು ಲೋಕಾಯುಕ್ತ ಕಚೇರಿಗೆ ಬಂದಾಗ ಸಮಯ ಮಧ್ಯಾಹ್ನ *3.30* ಆಗಿತ್ತು.

ಲೋಕಾಯುಕ್ತ ಪೊಲೀಸರು ನಾನು ಯಾರು ಎನ್ನುವ ಬಗ್ಗೆ ಸದರಿ ಮಹಾದೇವ ಹಾಗು ಮಂಜುರವರಿಗೆ ತಿಳಿಸಿದರು. ನನ್ನ ಮೊಬೈಲ್‌ನ್ನು ಗ್ರಾಮದವರು ತೆಗೆದುಕೊಂಡರು ಆದರೆ ವಾಪಸ್ಸು ಕೊಡಲಿಲ್ಲ.

***(ಮುಂದುವರೆದ ಮುಖ್ಯವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.)***

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

*(ರಮಾ ಬಿ.ಜಿ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕಃ** ***15.09.2021***

**ಸಾಕ್ಷಿಗೆ ಪ್ರಮಾಣವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

*5.* ಲೋಕಾಯುಕ್ತ ಪೊಲೀಸರು ಕರೆಸಿದ ಅಧಿಕಾರಿಗಳು ದೂರು ಕೊಟ್ಟಿರುವವರು ಯಾರೆಂದು ಕೇಳಿದಾಗ ಅದು ನಾನೇ ಎಂದು ಹೇಳಿದೆನು. ಯಾರ ವಿರುದ್ಧ ದೂರು ಕೊಟ್ಟಿರುತ್ತೀರಾ ಎಂದು ಸದರಿ ಅಧಿಕಾರಿಗಳು ನನ್ನನ್ನು ಕೇಳಲಿಲ್ಲ. ನಾನು ಆ ಸಮಯದಲ್ಲಿ ಎಂ.ಟಿ.ಎಸ್. ಕಂಪನಿಯ ಮೊಬೈಲ್‌ನ್ನು ಉಪಯೋಗಿಸುತ್ತಿದ್ದೆನು. ಸದರಿ ಮೊಬೈಲ್‌ನಲ್ಲಿ ನಾನು ಆರೋಪಿ - ಬಸವಲಿಂಗಯ್ಯರವರೊಂದಿಗೆ ಮಾತನಾಡಿದ್ದನ್ನು ರೆಕಾರ್ಡ್ ಮಾಡಿಕೊಂಡಿದ್ದೆನು. ಆ ರೀತಿ ರೆಕಾರ್ಡ್ ಮಾಡಿಕೊಂಡಿದ್ದ ಮೊಬೈಲ್‌ನ್ನು ನಾನು ಲೋಕಾಯುಕ್ತ ಪೊಲೀಸರಿಗೆ ಕೊಟ್ಟೆನು.

***(ಮುಂದುವರೆದ ಮುಖ್ಯವಿಚಾರಣೆಯನ್ನು ಸಾಕ್ಷಿ ಸರಿಯಾಗಿ ಉತ್ತರ ಕೊಡುತ್ತಿಲ್ಲವಾದ್ದರಿಂದ ಮುಂದೂಡಲಾಯಿತು.)***

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

*(ರಮಾ ಬಿ.ಜಿ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

ದಿನಾಂಕಃ *12.01.2023*

***(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)***
**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಮೊಬೈಲ್ ನಲ್ಲಿ ರೆಕಾರ್ಡ್ ಆಗಿದ್ದನ್ನು ಯಾರಿಗೂ ಕೇಳಿಸಿಲ್ಲ. ಮೊಬೈಲನ್ನು ತನಿಖಾಧಿಕಾರಿಗಳು ಇಟ್ಟುಕೊಂಡರು. ಲಂಚದ ಹಣ *10* ಸಾವಿರಗಳನ್ನು ನಾನು ಲೋಕಾಯುಕ್ತ ಕಚೇರಿಗೆ ತೆಗೆದುಕೊಂಡು ಹೋಗಿದ್ದೆ. ಅದರಲ್ಲಿ *1000* ರೂ ಮುಖಬೆಲೆಯ *10* ನೋಟುಗಳು ಇದ್ದವು. ಸದರಿ ನೋಟುಗಳನ್ನು ತೋರಿಸಿದರೆ ಗುರುತಿಸುತ್ತೇನೆ. ಸದರಿ ಹಣವನ್ನು ಹಾಜರುಪಡಿಸಿದೆ. ಸದರಿ ಹಣದ ಮೇಲೆ ಪೌಡರ್ ಲೇಪಿಸಿದರು. ಆ ಸಮಯದಲ್ಲಿ ಮಹಾದೇವಸ್ವಾಮಿ ಮತ್ತು ಮಂಜುನಾಥ ಎಂಬ ವ್ಯಕ್ತಿಗಳು ಇದ್ದರು. ಸದರಿ ಮಂಜುನಾಥ ರವರು ಷರ್ಟಿನ ಎಡಗಡೆ ಜೇಬಿಗೆ ಹಣವನ್ನು ಇಟ್ಟರು.

*1* ನೇ ಆರೋಪಿನ ಬಸವಲಿಂಗಯ್ಯ ಕೇಳಿದಾಗ ಕೊಡುವಂತೆ ತಿಳಿಸಿದರು. ಕೊಟ್ಟ ನಂತರ ಆರೋಪಿ ಹಣ ಪಡೆದುಕೊಂಡ ಬಗ್ಗೆ ತಲೆ ಸವರಿಕೊಳ್ಳುವ ಮೂಲಕ ತಮಗೆ ಸೂಚನೆ ಕೊಡಬೇಕು ಎಂದು ತನಿಖಾಧಿಕಾರಿಗಳು ಸೂಚಿಸಿದರು. ಹಣವನ್ನು ಇಡುವ ಮೊದಲು ನನ್ನ ಜೇಬಿನ ಬಗ್ಗೆ ಯಾವುದೇ ಪ್ರಕ್ರಿಯೇ ಮಾಡಿಲ್ಲ.

ಹಣವನ್ನು ಕಚೇರಿಯಲ್ಲಿ ಇಟ್ಟಮೇಲೆ ಪಂಚರ ಕೈತೊಳೆಸುವ ಪ್ರಕ್ರಿಯೇ ಮಾಡಿಲ್ಲ. ಆರೋಪಿತರ ಮತ್ತು ನನ್ನ ಸಂಭಾಷಣೆಯನ್ನು ಮುದ್ರಿಸಿಕೊಳ್ಳಲು ತನಿಖಾಧಿಕರಿಗಳು ಒಂದು ರಿಕಾರ್ಡ್ರನ್ನು ಕೊಟ್ಟು ಸಂಭಾಷಣೆಯನ್ನು ರಿಕಾರ್ಡ್ ಮಾಡಿಕೊಳ್ಳಲು ತಿಳಿಸಿದರು.

ನನ್ನ ಜೊತೆಗೆ ಚಾಸಾಃ *3* ಮಂಜುನಾಥ್ ಇವರಿಗೆ ಹೋಗುವಂತೆ ತಿಳಿಸಿದರು. ಅವರಿಗೆ ದೂರುದಾರ ಆರೋಪಿಯನ್ನು ಭೇಟಿಯಾದ ಸಮಯದಲ್ಲಿ ಅವನ ಜೊತೆ ಇರುವಂತೆ ಸೂಚಿಸಿದರು. ಲೋಕಾಯುಕ್ತ ಕಚೇರಿಯಲ್ಲಿ ಲೋಕಾಯುಕ್ತ ಪೊಲೀಸರು ನೋಟುಗಳ ನಂಬರುಗಳನ್ನು ಒಂದು ಹಾಳೆಯಲ್ಲಿ

ನಮೂದಿಸಿಕೊಂಡರು. ಅದು ನಿಪಿಃ *2* ಎಂದು ಗುರುತಿಸಲಾಗಿತ್ತು. ಅದಕ್ಕೆ ನಾನು ಸಹಿ ಹಾಕಿದ್ದೇನೆ. ಸಾಕ್ಷಿ ಸಹಿಯನ್ನು ನಿಪಿಃ *2* ಎ ಎಂದು ಗುರುತಿಸಲಾಯಿತು.

ಪಂಚನಾಮೆ ಕಾಲದಲ್ಲಿ ಪೊಲೀಸರು ಪೋಟೋಗಳನ್ನು ತೆಗೆದರು. ಸಾಕ್ಷಿ ಗುರುತಿಸಿದ ಸದರಿ ಪೋಟೋಗಳನ್ನು ನಿಪಿಃ *3* ರಿಂದ *17* ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೆಗಳ ಬಗ್ಗೆ ಪೊಲೀಸರು ಬರವಣಿಗೆ ಮಾಡಿರುತ್ತಾರೆ. ಸಾಕ್ಷಿ ಗುರುತಿಸಿದ ಪ್ರಾಯೋಗಿಕ ಪಂಚನಾಮೆಯನ್ನು ನಿಪಿಃ *18* ಎಂದು ಸಾಕ್ಷಿ ಸಹಿಯನ್ನು ನಿಪಿಃ *18* ಎ ಎಂದು ಗುರುತಿಸಲಾಯಿತು.

ಲೋಕಾಯ್ತು ಇನ್ಸ್ ಪೆಕ್ಟರ್ *(ಚಾಸಾಃ 21)* ನಾನು ಚಾಸಾಃ *2, 3* ಚನ್ನಪಟ್ಟಣ ಪೊಲೀಸ್ ಠಾಣೆ ಪಕ್ಕ ಇರುವ ಆರೋಪಿ ಬಸವಲಿಂಗಯ್ಯ ರವರ ಕಚೇರಿ ಹತ್ತಿರ ಹೋದೆವು. ನಾನು ಮತ್ತು ಮಂಜುನಾಥ *2* ನೇ ಮಹಡಿಯಲ್ಲಿರುವ *1* ನೇ ಆರೋಪಿ ಕಚೇರಿಗೆ ಹೋದೆವು. ಕಚೇರಿಗೆ ಬೀಗ ಹಾಕಿತ್ತು. ನಾವು ಕೆಳಗಡೆ ಬಂದೆವು. ಅದೇ ಕಟ್ಟಡದಲ್ಲಿ ಕೆಳಗಡೆ ಮಹಡಿಯಲ್ಲಿ *2* ನೇ ಆರೋಪಿ ಆನಂದ್ ಇವರ ಬೋರ್ ವೆಲ್ ರಿಪೇರಿ ಅಂಗಡಿ ಇತ್ತು. ಅಲ್ಲಿಗೆ ಹೋದೆವು. ಅಲ್ಲಿ *2* ನೇ ಆರೋಪಿ ಇದ್ದರು ಅವರನ್ನು *1* ನೇ ಆರೋಪಿ ಬಗ್ಗೆ ವಿಚಾರಣೆ ಮಾಡಿದೆವು. ಅದಕ್ಕೆ ಆನಂದ್ ಈ ದಿನ *1* ನೇ ಆರೋಪಿ ಬಂದಿಲ್ಲ ಎಂದು ತಿಳಿಸಿದನು. *1* ನೇ ಅರೋಪಿ ಬಗ್ಗೆ ಆತ ಎಲ್ಲಿದ್ದಾನೆ ಎಂದು ತಿಳಿದುಕೊಳ್ಳುವ ವಿಚಾರ ಮಾಡಿಲ್ಲ. *1* ನೇ ಆರೋಪಿ ಎಲ್ಲಿದ್ದಾನೆ ಎಂದು ಆತನಿಗೆ ಫೋನ್ ಮಾಡಿ ವಿಚಾರಿಸಲಿಲ್ಲ. *2* ನೇ ಆರೋಪಿ ಆನಂದ್ ಕೈಯಲ್ಲಿ ನಾನು ತೆಗೆದುಕೊಂಡು ಹೋಗಿದಂತ *10* ಸಾವಿರ ರೂಗಳನ್ನು ಕೊಟ್ಟೆನು. ಸದರಿ ಹಣವನ್ನು ಆನಂದ್ ಕೈಗೆ ನೀಡುವಂತೆ ಅಲ್ಲೇ ಇದ್ದ ರಾಮಪುರ ಗ್ರಾಮದ ನಾರಾಯಣಪ್ಪ ಎಂಬುವರು ಹೇಳಿದರು. *1* ನೇ ಆರೋಪಿ ಬಸವಲಿಂಗಯ್ಯ ನವರಿಗೆ ಕೊಡುವಂತೆ ಹೇಳಿ ನಾನು ಹಣವನ್ನು ಕೊಟ್ಟೆನು.

*2* ನೇ ಆರೋಪಿ *10* ಸಾವಿರ ರೂಗಳನ್ನು ಎಣಿಸಿಕೊಂಡು ಷರ್ಟಿನ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡರು. ನಾನು ತನಿಖಾಧಿಕಾರಿಗಳಿಗೆ ತಲೆ ಸವರಿಕೊಳ್ಳುವ

ಮೂಲಕ ಸೂಚನೆ ಕೊಟ್ಟೆನು. ಇನ್ಸ್-ಪೆಕ್ಟರ್, ಪಂಚರಾದ ಮಹಾದೇವಸ್ವಾಮಿ ಅಲ್ಲಿಗೆ ಬಂದರು. ತನಿಖಾಧಿಕಾರಿಗಳು ವಿಚಾರಿಸಿದಾಗ ನಾನು ಹಣವನ್ನು *2* ನೇ ಆರೋಪಿಗೆ ಕೊಟ್ಟಿದ್ದೆನು ಎಂದು ತಿಳಿಸಿದರು. ನಾನು ಗಾಬರಿಯಲ್ಲಿ *2* ನೇ ಆರೋಪಿ ಮತ್ತು ನನ್ನ ಸಂಭಾಷಣೆಯನ್ನು ರೆಕಾರ್ಡ್ ಮಾಡಿ ದಾಖಲೆ ಮಾಡಿಕೊಳ್ಳಲು ಆಗಲಿಲ್ಲ. ಹಾಗಾಗಿ ರೆಕಾರ್ಡ್‌ನ್ನು ನಾನು ಇನ್ಸ್-ಪೆಕ್ಟರಿಗೆ ವಾಪಸ್ಸು ಕೊಟ್ಟೆ.

ಲೋಕಾಯುಕ್ತ ಪೊಲೀಸರು *2* ನೇ ಆರೋಪಿಯನ್ನು ಹಿಡಿದುಕೊಂಡರು. ತನಿಖಾಧಿಕಾರಿಗಳು ನೀರು ಹಾಕಿ *2* ನೇ ಆರೋಪಿಯ ಎರಡು ಕೈಗಳನ್ನು ತೊಳೆಸಿದರು. ಕೈತೊಳೆಸುವ ಮುನ್ನ ಸದರಿ ದ್ರಾವಣ ಬಿಳಿ ಬಣ್ಣ ಇತ್ತು ಕೈ ತೊಳೆಸಿದ ನಂತರ ದ್ರಾವಣ ಗುಲಾಬಿ ಬಣ್ಣಕ್ಕೆ ಬಂತು. ಆ ದ್ರಾವಣವನ್ನು ತನಿಖಾಧಿಕಾರಿಗಳು ಒಂದೆರಡು ಬಾಟಲಿಗಳಲ್ಲಿ ಹಾಕಿಕೊಂಡು ವಶಪಡಿಸಿಕೊಂಡರು. ಮೊದಲು *2* ನೇ ಆರೋಪಿಯ ಬಲಗೈ ಬೆರಳುಗಳನ್ನು ತೊಳೆಸಿದರು ನಂತರ ಎಡಗೈ ಬೆರಳುಗಳನ್ನು ತೊಳೆಸಿದರು. ಸದರಿ ಬಾಟಲುಗಳನ್ನು ಕ್ರಮವಾಗಿ ಮುಮಾಃ *1* ಮತ್ತು *2* ಎಂದು ಗುರುತಿಸಲಾಯಿತು. ತನಿಖಾಧಿಕಾರಿಗಳಿಗೆ ಆರೋಪಿ *2* ಆನಂದ್ ನಾನು ಕೊಟ್ಟ ಹಣವನ್ನು ಷರ್ಟಿನ ಎಡಗಡೆ ಜೇಬಿನಲ್ಲಿ ಇಟ್ಟುಕೊಂಡ ಎಂದು ಹೇಳಿದೆ, ಆರೋಪಿಯೇ ತಮ್ಮ ಜೇಬಿನಿಂದ ಹಣ ತೆಗೆದು ಇನ್ಸ್ ಪೆಕ್ಟರ್ ರವರಿಗೆ ಕೊಟ್ಟರು. ಸದರಿ ಹಣದ ಕುರಿತು ಯಾವುದೇ ಪರಿಶೀಲನೆ ಮಾಡಲಿಲ್ಲ. ಸದರಿ ಹಣವನ್ನು ಒಂದು ಕವರಿನಲ್ಲಿ ಹಾಕಿ ಇನ್ಸ್-ಪೆಕ್ಟರ್ ವಶಪಡಿಸಿಕೊಂಡರು.

ಆರೋಪಿ ಆನಂದ್ ರವರ ಷರ್ಟನ್ನು ಪೊಲೀಸರು ವಶಪಡಿಸಿಕೊಂಡರು. ಆರೋಪಿಯನ್ನು ಬನಿಯನ್ ನಲ್ಲಿಯೇ ಕರೆದುಕೊಂಡು ಬಂದರು. ಒಂದು ಸೀಲಾದ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿ ಒಂದು ಷರ್ಟ್ ಇದ್ದು, ಅದನ್ನು ಸಾಕ್ಷಿ ಗುರುತಿಸಿದ್ದು ಅದನ್ನು ಮುಮಾಃ *3* ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಫೋಟೋಗಳನ್ನು ನಿಪಿಃ *19* ರಿಂದ *31* ಎಂದು, ಅವುಗಳು ನೆಗಟೀವ್ ಇಲ್ಲದ ಕಾರಣ ಆಕ್ಷೇಪಣೆಗೆ ಒಳಪಟ್ಟು

ಗುರುತಿಸಲಾಯಿತು. ಸದರಿ ಜಾಗದ ನಕಾಶೆಯನ್ನು ತನಿಖಾಧಿಕಾರಿಗಳು ಮಾಡಿಲ್ಲ. ನಂತರ ನಮ್ಮನ್ನೆಲ್ಲ *2* ನೇ ಆರೋಪಿಯೊಂದಿಗೆ ಲೋಕಾಯುಕ್ತ ಕಚೇರಿಗೆ ಕರೆದುಕೊಂಡು ಬಂದರು. ಸದರಿ *2* ನೇ ಆರೋಪಿ ಈ ದಿನ ನ್ಯಾಯಾಲಯದ ಮುಂದೆ ಹಾಜರಿರುತ್ತಾನೆ. ಅದೇ ರೀತಿ *1* ನೇ ಆರೋಪಿ ಬಸವಲಿಂಗಯ್ಯ ಸಹ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

*2* ನೇ ಆರೋಪಿಯನ್ನು ವಿಚಾರಣೆ ಮಾಡಿದರು, ಅವನು ಏನು ಹೇಳಿದ ಎಂದು ಗೊತ್ತಿಲ್ಲ. ವಶಪಡಿಸಿಕೊಂಡ ವಸ್ತುಗಳಿಗೆ ಯಾವ ರೀತಿ ಸೀಲು ಹಾಕಿದರು ಎಂದು ಗೊತ್ತಿಲ್ಲ. ಮಹಜರ್ ಕಾಲಕ್ಕೆ ನನ್ನ ಮೊಬೈಲನ್ನು ತನಿಖಾಧಿಕಾರಿಗಳು ವಶಪಡಿಸಿಕೊಂಡರು. ಸೀಲಾದ ಒಂದು ಕವರನ್ನು ತೆರೆದ ನ್ಯಾಯಾಯದಲ್ಲಿ ತೆರೆಯಲಾಯಿತು. ಅದರಲ್ಲಿ ಒಂದು ಮೊಬೈಲ್ ಇದ್ದು ಸಾಕ್ಷಿ ಅದನ್ನು ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ತನ್ನ ಮೊಬೈಲನ್ನು ಮುಮಾಃ *4* ಎಂದು ಗುರುತಿಸಲಾಯಿತು. ಈ ಎಲ್ಲಾ ಪ್ರಕ್ರಿಯೇ ಬಗ್ಗೆ ಪೊಲೀಸರು ಬರವಣಿಗೆ ಮಾಡಿ ನನ್ನ ಸಹಿ ಪಡೆದುಕೊಂಡರು. ಸದರಿ ಮಹಜರನ್ನು ನಿಪಿಃ *32* ಎಂದು, ಸಾಕ್ಷಿ ಸಹಿಯನ್ನು ನಿಪಿಃ *32* ಎ ಎಂದು ಗುರುತಿಸಲಾಯಿತು.

ಎರಡು ದಿವಸದ ನಂತರ ಲೋಕಾಯಕ್ತಾ ಪೊಲೀಸರು ಕರೆಸಿದರು. ಅಲ್ಲಿ ರಾಮಪುರದಲ್ಲಿರುವಂತಹ ಗ್ರಾಮ ಪಂಚಾಯ್ತಿ ಕಚೇರಿಗೆ ಕರೆದುಕೊಂಡು ಹೋದರು. *1* ನೇ ಆರೋಪಿಯನ್ನು ಗ್ರಾಮ ಪಂಚಾಯ್ತಿ ಕಚೇರಿಗೆ ಕರೆಸಿದರು.

ಸಾಕ್ಷಿಯ ವಿನಂತಿಯ ಮೇರೆಗೆ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕಃ** ***15.02.2023***
***(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)***

**ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ**

***6.*** ನಂತರ ಆರೋಪಿತರ ಆರೋಪಿಯ ಕಚೇರಿಗೆ ಕರೆದುಕೊಂಡು ಹೋಗಿ ಅಲ್ಲಿ ನನ್ನ ಸಹಿ ಪಡೆದುಕೊಂಡರು. ಸಾಕ್ಷಿ ಗುರುತಿಸಿದ ಮಹಜರನ್ನು ಈಗ ನಿಪಿ.*33* ಎಂತಲೂ ಸಾಕ್ಷಿಯ ಸಹಿಯನ್ನು ಈಗ ನಿಪಿ.*33*(ಎ) ಎಂದು ಗುರುತಿಸಲಾಯಿತು. ಆರೋಪಿಯ ಕಚೇರಿಯಲ್ಲಿ ಯಾವುದೇ ದಾಖಲೆಯನ್ನು ವಶಪಡಿಸಿಕೊಂಡಿಲ್ಲ.

***7.*** ನಾನು ಲೋಕಾಯುಕ್ತ ಕಚೇರಿಯಲ್ಲಿ ಹಾಜರುಪಡಿಸಿದ ರೂ.*1000* ಮುಖಬೆಲೆಯ *10* ನೋಟುಗಳನ್ನು ಈಗ ಗುರುತಿಸಲಾಗುವುದಿಲ್ಲ. ಆರೋಪಿತರು ಇಂದು ನ್ಯಾಯಾಲಯದ ಮುಂದೆ ಹಾಜರಿರುತ್ತಾರೆ.

***8.*** ತನಿಖಾಧಿಕಾರಿಗಳು ನನ್ನ ಸಮಕ್ಷಮ ಲೋಕಾಯುಕ್ತ ಕಚೇರಿಯಲ್ಲಿ ಆರೋಪಿತರ ಹೇಳಿಕೆಗಳನ್ನು ಪಡೆದುಕೊಂಡಿದ್ದಾರೆಯೇ ಅಂದರೆ ಇಲ್ಲ. ಆರೋಪಿ - ಆನಂದ್ ಎಲೆಕ್ಟ್ರಿಕಲ್ ಶಾಪ್ ಹತ್ತಿರ ಪೊಲೀಸರ ಯಾವುದೇ ಫೋಟೋಗಳನ್ನು ತೆಗೆಸಿಲ್ಲ. ರಾಂಪುರ ಗ್ರಾಮ ಪಂಚಾಯತಿ ಕಚೇರಿಯಲ್ಲಿ ತನಿಖಾಧಿಕಾರಿ ಯಾವುದೇ ಫೋಟೋಗಳನ್ನು ತೆಗೆಸಿಲ್ಲ. ಲೋಕಾಯುಕ್ತ ಪೊಲೀಸರು ನನ್ನ ಹೇಳಿಕೆ ಪಡೆದಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)**

**ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ**

*(*ವಿಶೇಷ ಪಿಪಿರವರ ಕೋರಿಕೆಯ ಮೇರೆಗೆ ಪಾಟೀ ಸವಾಲು ಮುಂದೂಡಲಾಯಿತು.*)*

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

*(*ನಿಂಗಪ್ಪ ಪರಶುರಾಮ ಕೋಪರ್ಡೆ*)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

**ದಿನಾಂಕ :** ***15.03.2023***
**ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ :</u>**

***9.*** ಲೋಕಾಯುಕ್ತ ಕಚೇರಿಯಲ್ಲಿ ನನ್ನ ಮತ್ತು *1* ನೇ ಆರೋಪಿ ಮಧ್ಯೆ ನಡೆದ ಸಂಭಾಷಣೆಯನ್ನು ಮೊಬೈಲಿನಲ್ಲಿ ರೆಕಾರ್ಡ್ ಮಾಡಿಕೊಂಡಿದ್ದನ್ನು ಪೊಲೀಸರು ನನಗೆ ಮತ್ತು ಪಂಚರಿಗೆ ಕೇಳಿಸಿದರು ಅಂದರೆ ಸರಿಯಲ್ಲ. ದಾಖಲಾಗಿದ್ದ ಧ್ವನಿಯನ್ನು ಲಿಪಿಕರಣಗೊಳಿಸಿದರು ಅಂದರೆ ಸರಿಯಲ್ಲ. ಲೋಕಾಯುಕ್ತ ಪೊಲೀಸರು ನಾನು ಹಾಜರುಪಡಿಸಿದ ರೂ.*1000* ಮುಖಬೆಲೆಯ *10* ನೋಟುಗಳಿಗೆ ಪಿನಾಪ್ತಲಿನ್ ಪುಡಿ ಸವರಿದರು ಅಂದರೆ ಸರಿಯಲ್ಲ. ಸದರಿ ನೋಟುಗಳನ್ನು ನನ್ನ ಜೇಬಿಗೆ ಇಡುವ ಮೊದಲು ಪಂಚ - *2* ರವರು ನನ್ನ ಜೇಬಿನಲ್ಲಿ ಏನೂ ಇಲ್ಲ ಎಂಬ ಬಗ್ಗೆ ಖಚಿತಪಡಿಸಿಕೊಂಡರು ಅಂದರೆ ಸರಿಯಲ್ಲ.

***10.*** ಲೋಕಾಯುಕ್ತ ಪೊಲೀಸರು ಒಂದು ಬಟ್ಟಲಿನಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣ ತಯಾರಿಸಿದರು ಅಂದರೆ ಸರಿಯಲ್ಲ. ಅದರಲ್ಲಿ ಸ್ವಲ್ಪ ಭಾಗವನ್ನು ಒಂದು ಬಾಟಲಿಗೆ ಹಾಕಿ ಮಾದರಿಗಾಗಿ ತೆಗೆದು ಸದರಿ ಬಾಟಲನ್ನು ಡಬ್ಲ್ಯೂ ಡಬ್ಲ್ಯೂ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು, ಉಳಿದ ದ್ರಾವಣದಲ್ಲಿ ಪಂಚ - *1* ರವರ ಕೈ ಬೆರಳುಗಳನ್ನು ಅದ್ದಿಸಿದರು, ಅದು ಗುಲಾಬಿ ಬಣ್ಣಕ್ಕೆ ತಿರುಗಿತು, ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಸೀಲು ಮಾಡಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

***11.*** ಲೋಕಾಯುಕ್ತ ಪೊಲೀಸರು ನನ್ನ ಮತ್ತು *1* ನೇ ಆರೋಪಿ ನಡುವೆ ನಡೆಯುವ ಸಂಭಾಷಣೆಯನ್ನು ದಾಖಲು ಮಾಡಿಕೊಳ್ಳಲು ಒಂದು ವಾಯ್ಸ್ ರೆಕಾರ್ಡರ್ ಕೊಟ್ಟಿದ್ದರು ಅಂದರೆ ಸರಿ.

***12.*** ನನ್ನ ಜೊತೆಗೆ ಪಂಚ *1* - ಮಹಾದೇವಸ್ವಾಮಿರವರನ್ನು *1* ನೇ ಆರೋಪಿಯನ್ನು ಭೇಟಿ ಮಾಡಲಿಕ್ಕೆ ಕಳುಹಿಸಿಕೊಟ್ಟರು ಅಂದರೆ ಸರಿ. *1* ನೇ ಆರೋಪಿ ಇಟ್ಟುಕೊಂಡಿರುವ ಖಾಸಗಿ ಕಚೇರಿಗೆ ನಾನು ಮತ್ತು ಪಂಚ - *1* ಹೋದೆವು ಅಂದರೆ ಸರಿ. ನಾವು ಅಲ್ಲಿಗೆ ಹೋದಾಗ *1* ನೇ ಆರೋಪಿ ಇರಲಿಲ್ಲ,

ಹಾಗಾಗಿ ನಾನು ನನ್ನ ಮೊಬೈಲಿನಲ್ಲಿ ಅವರಿಗೆ ಕರೆ ಮಾಡಿದೆನು ಅಂದರೆ ಸರಿಯಲ್ಲ.

*13.* ನಾವು ಕೆಳಗೆ *2* ನೇ ಆರೋಪಿ ಅಂಗಡಿಯ ಹತ್ತಿರ ಕಾಯುತ್ತಿರುವಾಗ ಸಂಜೆ *6.15* ಗಂಟೆಗೆ *1* ನೇ ಆರೋಪಿ - ಬಸವಲಿಂಗಯ್ಯ ಅಲ್ಲಿಗೆ ಬಂದರು ಅಂದರೆ ಸರಿಯಲ್ಲ. ಆಗ ಬಸವಲಿಂಗಯ್ಯ ಬಂದು *2* ನೇ ಆರೋಪಿ - ಆನಂದ್‌ರವರ ಎಲೆಕ್ಟ್ರಿಕ್ ಅಂಗಡಿಯ ಒಳಗೆ ಹೋದರು ಅಂದರೆ ಸರಿಯಲ್ಲ. ನಾನು ಮತ್ತು ಪಂಚ – *1* - ಮಹಾದೇವಸ್ವಾಮಿ ಅವರ ಹಿಂದೆಯೇ ಹೋದೆವು ಅಂದರೆ ಸರಿಯಲ್ಲ. ಆದರೆ ಅಂಗಡಿ ಒಳಗೆ *1* ನೇ ಆರೋಪಿ ಇದ್ದಾರಾ ಎಂದು ನೋಡಲು ಹೋಗಿದ್ದೆವು.

*14.* *1* ನೇ ಆರೋಪಿಯನ್ನು ನಾನು ನನ್ನ ಚೆಕ್ ಸಂಬಂಧ ಅವರನ್ನು ವಿಚಾರಿಸಿದೆನು, ಆಗ ಅವರು ಹಣ ತಂದಿದ್ದೀಯಾ ಎಂದು ಕೇಳಿದರು ಅಂದರೆ ಸರಿಯಲ್ಲ. *1* ನೇ ಆರೋಪಿಗೆ ನಾನು ರೂ.*10* ಸಾವಿರ ತಂದಿದ್ದೇನೆ ಎಂದು ಹೇಳಿದೆ, ಆಗ ಅವರು ಹಣ ಕೊಡು ಎಂದು ಕೇಳಿದರು ಅಂದರೆ ಸರಿಯಲ್ಲ. ನಾನು ಅವರಿಗೆ ಹಣ ಕೊಡಲು ಹೋದಾಗ *1* ನೇ ಆರೋಪಿ ಅದನ್ನು *2* ನೇ ಆರೋಪಿ - ಆನಂದ್ ಕೈಗೆ ಕೊಡುವಂತೆ ತಿಳಿಸಿದರು ಅಂದರೆ ಸರಿಯಲ್ಲ. ಆನಂತರ ನಾನು ಸದರಿ ಹಣವನ್ನು *2* ನೇ ಆರೋಪಿ ಕಡೆ ಕೊಟ್ಟೆನು, ಆಗ ಅವರು ಅದನ್ನು ಬಲಗೈಯಿಂದ ಪಡೆದುಕೊಂಡು ತನ್ನ ಎರಡೂ ಕೈಗಳಿಂದ ಎಣಿಸಿ, ತಮ್ಮ ಶರ್ಟಿನ ಎಡಭಾಗದ ಜೇಬಿನಲ್ಲಿಟ್ಟುಕೊಂಡರು ಅಂದರೆ ಸರಿಯಲ್ಲ. ಆನಂತರ *1* ನೇ ಆರೋಪಿ ನಿನ್ನ ಚೆಕ್‌ಗಳಿಗೆ ಬೆಳಿಗ್ಗೆ *11* ಗಂಟೆಗೆ ರೆಡಿಯಾಗಿರುತ್ತದೆ, ನೀನು ಪಂಚಾಯತಿ ಕಚೇರಿಯಲ್ಲಿ ಪಡೆದುಕೋ ಎಂದು ಹೇಳಿ, ನಂತರ *2* ನೇ ಆರೋಪಿಗೆ ಆಮೇಲೆ ಬಂದು ಹಣವನ್ನು ಪಡೆದುಕೊಳ್ಳುತ್ತೇನೆಂದು ಹೇಳಿ ಮೋಟಾರ್ ಬೈಕಿನಲ್ಲಿ ಹೋದರು ಅಂದರೆ ಸರಿಯಲ್ಲ.

*15.* ನಾನು ಸಂಜೆ *6.25* ಗಂಟೆಗೆ ಲೋಕಾಯುಕ್ತ ಪೊಲೀಸರಿಗೆ ತಲೆ ಸವರಿಕೊಳ್ಳುವುದರ ಮೂಲಕ ಸೂಚನೆ ಕೊಟ್ಟೆನು ಅಂದರೆ ಸರಿಯಲ್ಲ. ಆಗ ಲೋಕಾಯುಕ್ತ ಪೊಲೀಸರು, ಪಂಚ *2* ಹಾಗೂ ಸಿಬ್ಬಂದಿ ಅಲ್ಲಿಗೆ ಬಂದಾಗ ನನ್ನ ಮತ್ತು ಪಂಚ *-1* ರವರನ್ನು ವಿಚಾರಿಸಿದರು, ಅವರಿಗೆ ನಡೆದ ವಿದ್ಯಾಮಾನಗಳನ್ನು ತಿಳಿಸಿದೆವು ಅಂದರೆ ಸರಿಯಲ್ಲ.

*16.* ತನಿಖಾಧಿಕಾರಿಗಳು *2* ನೇ ಆರೋಪಿಗೆ ತನ್ನ ಪರಿಚಯ ಮಾಡಿಕೊಂಡು, ತನಿಖೆಗೆ ಸಹಕರಿಸಬೇಕೆಂದು ಕೇಳಿಕೊಂಡರು ಅಂದರೆ ಸರಿಯಲ್ಲ. ಆನಂತರ ತನಿಖಾಧಿಕಾರಿಗಳು ತಮ್ಮ ಸಿಬ್ಬಂದಿಯ ಮೂಲಕ *2* ಬಟ್ಟಲುಗಳಲ್ಲಿ ಸೋಡಿಯಂ ಕಾರ್ಬೋನೇಟ್ ದ್ರಾವಣವನ್ನು ತಯಾರಿಸಿದರು, ಆ ಎರಡೂ ಬಟ್ಟಲುಗಳಲ್ಲಿ ಸ್ವಲ್ಪ ದ್ರಾವಣವನ್ನು ಮಾದರಿಗಾಗಿ ತೆಗೆದು ಒಂದು ಬಾಟಲಿನಲ್ಲಿ ಹಾಕಿ ಸೀಲು ಮಾಡಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*17.* ಒಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ *2* ನೇ ಆರೋಪಿ ಬಲಗೈ ಬೆರಳುಗಳನ್ನು ಅದ್ದಿ ತೊಳೆದಾಗ ಅದು ಕಂದು ಬಣ್ಣ ಮಿಶ್ರಿತ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು, ಅದನ್ನು ಒಂದು ಬಾಟಲಿನಲ್ಲಿ ಹಾಕಿ ಡಬ್ಲ್ಯೂ ಡಬ್ಲ್ಯೂ ಅಕ್ಷರದಿಂದ ಸೀಲು ಮಾಡಿ ತನಿಖಾಧಿಕಾರಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*18.* ಇನ್ನೊಂದು ಬಟ್ಟಲಿನಲ್ಲಿದ್ದ ದ್ರಾವಣದಲ್ಲಿ *2* ನೇ ಆರೋಪಿ ಎಡಗೈ ಬೆರಳುಗಳನ್ನು ಅದ್ದಿ ತೊಳೆದಾಗ ಅದು ಕಂದು ಬಣ್ಣ ಮಿಶ್ರಿತ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು, ಅದನ್ನು ಒಂದು ಬಾಟಲಿನಲ್ಲಿ ಹಾಕಿ ಡಬ್ಲ್ಯೂ ಡಬ್ಲ್ಯೂ ಅಕ್ಷರದಿಂದ ಸೀಲು ಮಾಡಿ ತನಿಖಾಧಿಕಾರಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*19.* ನಂತರ ತನಿಖಾಧಿಕಾರಿಗಳು *2* ನೇ ಆರೋಪಿಗೆ ಲಂಚದ ಹಣ ಎಲ್ಲಿ ಎಂದು ಕೇಳಿದರು, ಆಗ ಅವರು ತಾವು ತೊಟ್ಟಿದ್ದ ಶರ್ಟಿನ ಎಡಭಾಗದ ಜೇಬಿನಲ್ಲಿರುವುದಾಗಿ ತಿಳಿಸಿದರು ಅಂದರೆ ಸರಿಯಲ್ಲ. ಸದರಿ ಹಣವನ್ನು ಪಂಚ - *1* ರವರು ತನಿಖಾಧಿಕಾರಿಯ ಸೂಚನೆ ಮೇರೆಗೆ ಸದರಿ ಹಣವನ್ನು ತೆಗೆದು ಪಂಚ *2* ರವರ ಬಳಿ ಹಿಂದೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಬರೆದುಕೊಂಡಿದ್ದ ನೋಟುಗಳ ವಿವರಗಳೊಂದಿಗೆ ಪರಿಶೀಲಿಸಿ ನೋಡಿದಾಗ ಅವು ಅದೇ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಕೊಟ್ಟಂತಹ ನೋಟುಗಳಾಗಿದ್ದವು ಎಂದ ಖಚಿತಪಡಿಸಿಕೊಂಡರು ಅಂದರೆ ಸರಿಯಲ್ಲ.

*20.* ಸದರಿ ನೋಟುಗಳನ್ನು ತನಿಖಾಧಿಕಾರಿಗಳು ಒಂದು ಖಾಲಿ ಕವರಿನಲ್ಲಿ ಹಾಕಿ ಬಾಯಿ ಅಂಟಿಸಿ ಡಬ್ಲ್ಯೂ ಡಬ್ಲ್ಯೂ ಆಂಗ್ಲ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*21.* ಆನಂತರ *2*ನೇ ಆರೋಪಿ ಧರಿಸಿದ್ದ ಶರ್ಟನ್ನು ಬಿಚ್ಚಿಸಿಕೊಂಡು, ಶರ್ಟಿನ ಎಡಭಾಗದ ಜೇಬಿನ ಒಳಭಾಗವನ್ನು ಹೊಸದಾಗಿ ಒಂದು ಬಟ್ಟಲಿನಲ್ಲಿ ತಯಾರಿಸಿದ ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿಸಿದಾಗ ಅದು ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿತು, ಸದರಿ ದ್ರಾವಣವನ್ನು ಒಂದು ಬಾಟಲಿನಲ್ಲಿ ಹಾಕಿ ಡಬ್ಲ್ಯೂ ಡಬ್ಲ್ಯೂ ಅಕ್ಷರದಿಂದ ಸೀಲು ಮಾಡಿ ವಶಪಡಿಸಿಕೊಂಡರು ಮತ್ತು ಅದೇ ಸದರಿ ಶರ್ಟನ್ನು ಒಂದು ಕವರಿನಲ್ಲಿ ಹಾಕಿ ಸೀಲು ಮಾಡಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*22.* ತನಿಖಾಧಿಕಾರಿಗಳು *1*ನೇ ಆರೋಪಿಯನ್ನು ದಸ್ತಗಿರಿ ಮಾಡಲು ತಮ್ಮ ಸಿಬ್ಬಂದಿಯನ್ನು ನೇಮಕ ಮಾಡಿದರು ಅಂದರೆ ಸರಿಯಲ್ಲ. ತನಿಖಾಧಿಕಾರಿಗಳು ಸ್ಥಳದಲ್ಲಿ ಕಚ್ಚಾ ನಕಾಶೆಯನ್ನು ತಯಾರಿಸಿದರು ಅಂದರೆ ಸರಿಯಲ್ಲ. ತನಿಖಾಧಿಕಾರಿಗಳು ಫೋಟೋಗಳನ್ನು ತಮ್ಮ ಸಿಬ್ಬಂದಿಯ ಮೂಲಕ ತೆಗೆಸಿದರು ಅಂದರೆ ಒಂದು ಫೋಟೋ ಮಾತ್ರ ತೆಗೆದರು. ಸದರಿ ಫೋಟೋವನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ನಿಪಿ.*22* ಆಗಿರುತ್ತದೆ.

*23.* ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜನ ಸೇರಿದ್ದರಿಂದ ಮುಂದಿನ ಟ್ರಾಪ್ ನಡವಳಿಕೆಯನ್ನು ಮುಂದುವರೆಸಲು ಅನಾನುಕೂಲವಾಗಿದ್ದರಿಂದ ಮುಂದಿನ ಟ್ರಾಪ್ ನಡವಳಿಯನ್ನು ನಡೆಸಲು ರಾತ್ರಿ *8.15* ಗಂಟೆಗೆ ರಾಮನಗರದ ಲೋಕಾಯುಕ್ತ ಕಚೇರಿಗೆ ಕರೆದುಕೊಂಡು ಬಂದರು ಅಂದರೆ ಸರಿಯಲ್ಲ.

*24.* ಲೋಕಾಯುಕ್ತ ಠಾಣೆಗೆ ಬಂದ ನಂತರ ತನಿಖಾಧಿಕಾರಿಗಳ ಸೂಚನೆಯ ಮೇರೆಗೆ ಪ್ರಾಯೋಗಿಕ ಪಂಚನಾಮೆ ಕಾಲಕ್ಕೆ ಪಡೆದುಕೊಂಡ ಮೊಬೈಲ್‌ನ್ನು ಹಾಜರುಪಡಿಸಿದೆನು, ತನಿಖಾಧಿಕಾರಿಗಳು ಬ್ಯಾಟರಿ ಹೊರ ತೆಗೆದು ಮೊಬೈಲಿನಲ್ಲಿದ್ದ ಸಿಮ್ ಸಮೇತ ಮುಂದಿನ ತನಿಖೆ ಸಂಬಂಧ ಕವರಿನಲ್ಲಿ ಹಾಕಿ ಡಬ್ಲ್ಯೂ ಡಬ್ಲ್ಯೂ ಅಕ್ಷರದ ಸೀಲು ಮಾಡಿ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*25.* ತನಿಖಾಧಿಕಾರಿಗಳು ಲೋಕಾಯುಕ್ತ ಕಚೇರಿಯಲ್ಲಿ *2*ನೇ ಆರೋಪಿ - ಆನಂದ್‌ರವರ ಸಮಜಾಯಿಷಿ ಕೇಳಿದರು, ಅವರು ತಮ್ಮ ಸಮಜಾಯಿಷಿಯನ್ನು ಹೇಳಿ, ತನಗೆ ಬರೆಯಲು ಬರುವುದಿಲ್ಲ ಎಂದು ಹೇಳಿದರು, ಆಗ ಮಹಿಳಾ ಸಿಬ್ಬಂದಿ ಶಾಂತಮ್ಮರವರು ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿದರು ಅಂದರೆ ಸರಿಯಲ್ಲ.

ನಂತರ *2* ನೇ ಆರೋಪಿಯನ್ನು ತನಿಖಾಧಿಕಾರಿ ದಸ್ತಗಿರಿ ಮಾಡಿದರು ಅಂದರೆ ಸರಿಯಲ್ಲ.

*26.* ಮೇಲ್ಕಂಡ ಎಲ್ಲಾ ವಿದ್ಯಾಮಾನಗಳ ಬಗ್ಗೆ ತನಿಖಾಧಿಕಾರಿಗಳು ಸಂಜೆ *6.30* ರಿಂದ ರಾತ್ರಿ *10.00* ಗಂಟೆಯವರೆಗೆ ಟ್ರಾಪ್ ಪಂಚನಾಮೆಯನ್ನು ತಯಾರಿಸಿದರು ಅಂದರೆ ಸರಿಯಲ್ಲ. ಸಾಕ್ಷಿ ಹೇಳುತ್ತಾರೆ ನಾನು ಬೆಳಿಗ್ಗೆ ನಿಪಿ.*32* - ಟ್ರಾಪ್ ಪಂಚನಾಮೆಗೆ ಸಹಿ ಮಾಡಿದ್ದೇನೆ.

*27.* ತಾಃ *23.11.2012* ನಮ್ಮನ್ನು ಲೋಕಾಯುಕ್ತ ಪೊಲೀಸರು ಕಚೇರಿಗೆ ಕರೆಸಿದ್ದರು ಅಂದರೆ ಸರಿ. ಮಧ್ಯಾಹ್ನ *1.15* ಗಂಟೆಗೆ *1* ನೇ ಆರೋಪಿ - ಬಸವಲಿಂಗಯ್ಯ ಖುದ್ದಾಗಿ ಲೋಕಾಯುಕ್ತ ಠಾಣೆಗೆ ಹಾಜರಾದರು ಅಂದರೆ ನನಗೆ ಗೊತ್ತಿಲ್ಲ. ಅವರಿಗೆ ತನಿಖಾಧಿಕಾರಿಗಳು ಪಿರ್ಯಾದುದಾರರು ಮಾಡಿಸಿದ ಕಾಮಗಾರಿಗಳ ಬಗ್ಗೆ ದಾಖಲೆಗಳ ಬಗ್ಗೆ ವಿಚಾರಿಸಿದಾಗ ಅವರು ತಮ್ಮ ಕಚೇರಿಯಲ್ಲಿವೆ ಎಂದು ಹೇಳಿದರು ಅಂದರೆ ಸರಿಯಲ್ಲ. ನಂತರ ತನಿಖಾಧಿಕಾರಿಗಳು ನನ್ನನ್ನು, ಪಂಚರನ್ನು, *1* ನೇ ಆರೋಪಿರವರನ್ನು ರಾಂಪುರ ಗ್ರಾಮ ಪಂಚಾಯತಿಗೆ ಮಧ್ಯಾಹ್ನ *2.30* ಗಂಟೆಗೆ ಕರೆದುಕೊಂಡು ಹೋದರು ಅಂದರೆ ಸರಿಯಲ್ಲ. ಆದರೆ ನನಗೆ ತನಿಖಾಧಿಕಾರಿಗಳು ಮಧ್ಯಾಹ್ನ ಸಮಯದಲ್ಲಿ ಅಲ್ಲಿಗೆ ಬರುವಂತೆ ಹೇಳಿದ್ದರು, ಹಾಗಾಗಿ ಅಲ್ಲಿಗೆ ಹೋದೆನು.

*28.* ಸದರಿ ಗ್ರಾಮ ಪಂಚಾಯತಿಯಲ್ಲಿ *1* ನೇ ಆರೋಪಿ ತಮ್ಮ ಬೀರುವಿನಲ್ಲಿದ್ದ ಕಾಮಗಾರಿಗೆ ಸಂಬಂಧಿಸಿದ ದಾಖಲಾತಿ ಕಡತವನ್ನು ತನಿಖಾಧಿಕಾರಿಗಳ ಮುಂದೆ ಹಾಜರುಪಡಿಸಿದರು, ಮತ್ತು ಎಸ್.ಬಿ.ಎಂ., ಚನ್ನಪಟ್ಟಣ ಶಾಖೆಯ ಒಂದು ಚೆಕ್ ಬುಕ್‌ನ್ನು ಕೂಡ ಹಾಜರುಪಡಿಸಿದರು, ಸದರಿ ದಾಖಲಾತಿಗಳು *(*ಪುಟಸಂಖ್ಯೆ *1* ರಿಂದ *125* ನ್ನು*)* ನನ್ನ ಸಮಕ್ಷಮ ವಶಪಡಿಸಿಕೊಂಡರು ಅಂದರೆ ಸರಿಯಲ್ಲ.

*29.* ನಂತರ ತನಿಖಾಧಿಕಾರಿ *1* ನೇ ಆರೋಪಿಯನ್ನು ಸಮಜಾಯಿಷಿ ಹೇಳುವುದಿದೆಯಾ ಎಂದು ಕೇಳಿದರು, ಅದಕ್ಕೆ *1* ನೇ ಆರೋಪಿ ತನ್ನ ಸ್ವ ಅಕ್ಷರದಿಂದ ಸಮಜಾಯಿಷಿಯನ್ನು ಬರೆದುಕೊಟ್ಟರು, ಅದನ್ನು ತನಿಖಾಧಿಕಾರಿಗಳು ತಮ್ಮ ವಶಕ್ಕೆ ಪಡೆದುಕೊಂಡರು ಅಂದರೆ ಸರಿಯಲ್ಲ. ದಾಖಲಾತಿ ವಶಪಡಿಸಿಕೊಂಡ

ಬಗ್ಗೆ ಮಧ್ಯಾಹ್ನ *2.30* ರಿಂದ *3.30* ಗಂಟೆಯವರೆಗೆ ನನ್ನ ಮತ್ತು ಪಂಚರ ಸಮಕ್ಷಮ ಮಹಜರ ತಯಾರಿಸಿರುತ್ತಾರೆ ಅಂದರೆ ನನಗೆ ಗೊತ್ತಿಲ್ಲ. ಆದರೆ ನನ್ನ ಸಹಿ ಪಡೆದುಕೊಂಡಿದ್ದಾರೆ.

*30.* ತಾಃ *23.11.2012* ರಂದು, ತಾಃ *22.11.2012* ರಂದು ನಡೆದಂತಹ ಸಂಪೂರ್ಣ ಟ್ರಾಪ್ ಪ್ರಕ್ರಿಯೆ ಸಂಬಂಧಪಟ್ಟಂತೆ ಮತ್ತು ತಾಃ*23.11.2012* ರಂದು ದಾಖಲಾತಿ ವಶಕ್ಕೆ ಪಡೆದು, ಮಹಜರ ಮಾಡಿದ ಬಗ್ಗೆ ನಾನು ನನ್ನ ವಿವರವಾದ ಹೇಳಿಕೆಯನ್ನು ನಿಪಿ.*34* ರಂತೆ ನೀಡಿರುತ್ತೇನೆ ಅಂದರೆ ಸರಿಯಲ್ಲ.

*31.* ತಾಃ *10.12.2012* ರಂದು ತನಿಖಾಧಿಕಾರಿಗಳು ನನ್ನನ್ನು ಪುನಃ ಲೋಕಾಯುಕ್ತ ಕಚೇರಿಗೆ ಕರೆಸಿ, ಪ್ರಾಯೋಗಿಕ ಮತ್ತು ಟ್ರಾಪ್ ಪಂಚನಾಮೆ ಕಾಲಕ್ಕೆ ತೆಗೆದಂತಹ ಎಲ್ಲಾ ಫೋಟೋಗಳನ್ನು ತೋರಿಸಿದರು ಅಂದರೆ ಸರಿಯಲ್ಲ. ಆದರೆ ಒಂದೇ ಫೋಟೋವನ್ನು ತೋರಿಸಿದರು. ಅದೇ ಪ್ರಕಾರ ನಾನು ಈಗ ಓದಿ ಹೇಳಿದಂತೆ ನನ್ನ ಮರುಹೇಳಿಕೆಯನ್ನು ನಿಪಿ.*35* ರಂತೆ ನೀಡಿರುತ್ತೇನೆ ಅಂದರೆ ಸರಿಯಲ್ಲ.

*32.* ನಾನು ಈಗ ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ *2* ನೇ ಆರೋಪಿ ಪರ ಶ್ರೀ.ಎಂ.ಪಿ., ವಕೀಲರಿಂದಃ**

*33.* ನಾನು ಕಾಂಟ್ರಾಕ್ಟ ಮಾಡಿಸುತ್ತಿದ್ದ ಬಗ್ಗೆ ಲೈಸೆನ್ಸ ಹೊಂದಿಲ್ಲ. ಪಂಚಾಯತಿಯಿಂದ ತಡೆ ಗೋಡೆ ಮತ್ತು ಚರಂಡಿ ಮಾಡಲಿಕ್ಕೆ ಅಗ್ರಿಮೆಂಟ್ ಮಾಡಿಕೊಟ್ಟಿದ್ದರಾ ಅಂದರೆ ಇಲ್ಲ.

*34.* ಜವಹರ್ ಯೋಜನೆ ಅಡಿಯಲ್ಲಿ ಪಂಚಾಯತಿಯವರು ನೇರವಾಗಿ ಕೂಲಿ ಕಾರ್ಮಿಕರಿಂದ ಕೆಲಸ ಮಾಡಿಸಿಕೊಳ್ಳುತ್ತಾರೆ, ಅವರು ಮಧ್ಯೆ ಯಾವುದೇ ಮಧ್ಯಸ್ಥಕರು ಇರುವುದಿಲ್ಲ ಅಂದರೆ ಸರಿ. ನರೇಗಾ ಯೋಜನೆಯಡಿಯಲ್ಲಿ ಕೆಲಸ ಮಾಡಬೇಕಾರದೆ ಜಾಬ್ ಕಾರ್ಡ್ ಹೊಂದಿರಬೇಕು ಅಂದರೆ ಸರಿ.

*35.* ಕೂಲಿ ಕಾರ್ಮಿಕರು ಪಂಚಾಯತಿಯವರಿಗೆ ಫಾರಂ - *6* ನ್ನು ಸಲ್ಲಿಸಿ ತಮಗೆ ಕೆಲಸ ಇಲ್ಲ, ತಮಗೆ ಕೆಲಸ ಕೊಡಬೇಕೆಂದು ಕೇಳಿಕೊಂಡು, ಅರ್ಜಿ

ಸಲ್ಲಿಸುತ್ತಾರೆ ಅಂದರೆ ಸರಿ. ಪಂಚಾಯತಿಯವರು ಕೆಲಸ ಇದ್ದಾಗ ಫಾರಂ *- 8* ನೋಟೀಸನ್ನು ಅರ್ಜಿ ಸಲ್ಲಿಸಿದ್ದ ಕಾರ್ಮಿಕರಿಗೆ ಕೊಡುತ್ತಾರೆ ಅಂದರೆ ಸರಿ. ಫಾರಂ *- 9* ನ್ನು ಜಾಬ್ ಕಾರ್ಡ್ ಇದ್ದವರಿಗೆ ಕೊಟ್ಟು ಇಂಥ ದಿವಸದಿಂದ ಇಂಥ ದಿನದವರೆಗೆ ಕೆಲಸಕ್ಕೆ ಹಾಜರಾಗಿ ಕೆಲಸ ಮುಗಿಸುವಂತೆ ತಿಳಿಸುತ್ತಾರೆ ಅಂದರೆ ಸರಿ.

*36.* ನನಗೆ ಜಾಬ್ ಕಾರ್ಡ್ ಇಲ್ಲ. ಪುಟಸಂಖ್ಯೆ *250* ರಲ್ಲಿ ಕೆಲಸ ಮಾಡಿದವರ ಹೆಸರು ತೋರಿಸಲಾಗಿದ್ದು, ಅದರಲ್ಲಿ ನನ್ನ ಹೆಸರು ಇಲ್ಲ ಅಂದರೆ ಸರಿ. ಕೆಲಸ ಮಾಡಿದವರಿಗೆ ಅವರ ಎಸ್.ಬಿ.ಎಂ., ಚನ್ನಪಟ್ಟಣ ಶಾಖೆಯ ಅಕೌಂಟ್‌ಗೆ ರೂ.*65,875/-* ಹಣ ನೇರವಾಗಿ ಜಮಾ ಆಗಿದೆ ಅಂದರೆ ಸರಿ.

*37.* ತಡೆಗೋಡೆ ನಿರ್ಮಾಣಕ್ಕೆ ಮರಳು, ಸಿಮೆಂಟ್, ದಿಂಡುಗಲ್ಲು, ಕಬ್ಬಿಣ, ಇತ್ಯಾದಿಗಳನ್ನು ಸುನೀಲ್‌ಕುಮಾರ ಎನ್ನುವವರು ಸರಬರಾಜು ಮಾಡುತ್ತಿದ್ದರು ಅಂದರೆ ಸರಿ. ಅದರ ಮೌಲ್ಯ ರೂ.*26,221/-* ಆಗಿತ್ತು ಅಂದರೆ ಸರಿ. ಅದು ಸುನೀಲ್‌ಕುಮಾರ್‌ರವರಿಗೆ ಸದರಿ ಹಣ ಚೆಕ್ ಮೂಲಕ ಪಂಚಾಯತಿರವರಿಂದ ಹೋಗಬೇಕು ಅಂದರೆ ಸರಿ. ಸದರಿ ಚೆಕ್ ತಾಃ*20.11.2012* ರಂದು ಕಾರ್ಯದರ್ಶಿ, ರಾಂಪುರ ಗ್ರಾಮ ಪಂಚಾಯತಿ ಕಡೆಯಿಂದ ಸುನಿಲ್‌ಕುಮಾರ್‌ಗೆ ಹೋಗಿದೆ ಅಂದರೆ ಗೊತ್ತಿಲ್ಲ. ಸದರಿ ಚೆಕ್ ಸುನೀಲ್‌ಕುಮಾರ್‌ರವರಿಗೆ ತಲುಪಿದ *2* ದಿನಗಳ ನಂತರ ನಾನು ಲೋಕಾಯುಕ್ತ ಕಚೇರಿಗೆ ಹೋಗಿ ದೂರು ಸಲ್ಲಿಸಿದ್ದೇನೆ ಅಂದರೆ ಚೆಕ್ ತಲುಪಿದೆಯೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಆದರೆ ನಾನು ದೂರು ನೀಡಿದ್ದು ತಾಃ*22.11.2012* ರಂದು ಅಂದರೆ ಸರಿ.

*38.* ಸುನೀಲ್‌ಕುಮಾರ್‌ರವರು ಮೆಟಿರಿಯಲ್ ಸಪ್ಲೈ ಮಾಡಿದ ಬಗ್ಗೆ ಕಾರ್ಯದರ್ಶಿರವರಿಂದ ಚೆಕ್ ಪಡೆದುಕೊಂಡು ಬರುವಂತೆ ನನಗೆ ತಿಳಿಸಿದ್ದರು, ನಾನು ಕಾರ್ಯದರ್ಶಿರವರನ್ನು ಭೇಟಿಯಾದಾಗ ಆಗಲೇ ಚೆಕ್‌ನ್ನು ಸುನೀಲ್‌ಕುಮಾರ್‌ವರ ಖಾತೆಗೆ ರವಾನಿಸಿದ್ದರು, ಸುನೀಲ್‌ಕುಮಾರ್‌ರವರು ತನಗೆ ಚೆಕ್ ತಲುಪಿದ ಬಗ್ಗೆ ನನಗೆ ಹೇಳಿರಲಿಲ್ಲ ಎಂದು ನಾನು ತನಿಖಾಧಿಕಾರಿಗಳ ಮುಂದೆ ಮರುಹೇಳಿಕೆಯಲ್ಲಿ ಹೇಳಿದ್ದೀರಾ ಅಂದರೆ ಹೇಳಿದ್ದೇನೆ.

***(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.)***

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***39.***

**<u>ಮರುವಿಚಾರಣೆಃ ಇಲ್ಲ.</u>**
**<u>*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).*</u>**

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ನಿಂಗಪ್ಪ ಪರಶುರಾಮ ಕೋಪರ್ಡೆ)
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**